ಅವರು ಒಬ್ಬರನೊಬ್ಬರು ಪ್ರೀತಿಸುತ್ತಿದ್ದರು ಅಷ್ಟೇ' ಅವಳು ಓದುತ್ತಾ ಹೋದಳು, ನಾನು ಕತ್ತರಿಸಿದೆ.

'ಮೇಡಂ, ನಿಮಗೆ ಕಥೆ ಇಷ್ಟವಾಗಿದ್ದರೆ ನನಗೂ ಸಂತೋಷ, ನನ್ನ ಕಥೆಯೊಂದರ ಪಾತ್ರದಂಥ ನಿಜವಾದ ಪಾತ್ರಗಳು ಹೀಗೆ ಕಥೆಗಾರನೆದುರು ಬಂದು ಇದು ನನ್ನ ಕಥೆ ಅನ್ನುವುದು ರೋಚಕ, ಅದಲ್ಲದೆ ಈ ಪರ್ಟಿಕ್ಯುಲರ್ ಕಥೆಯ ನಾಯಕ, ನಾಯಕಿ ನನ್ನಿಷ್ಟದ ಪಾತ್ರಗಳೂ ಹೌದು, ಹಾಗಿರುವಾಗ ನಿಜಕ್ಕೂ ಅಂಥ ಪ್ರೇಮಿಗಳಿದ್ದಾರೆ ಅನ್ನುವುದು ತಿಳಿಯುವಾಗ ಇನ್ನಷ್ಟು ಖುಷಿ. ನೀವು ಬಂದದ್ದು ಸಂತೋಷ ಮೇಡಂ'

ಇನ್ನು ನೀವು ಹೊರಡಿ ಎಂಬಂತೆ ನಾನೇ ಎದ್ದೆ. ಆಕೆ ಇಷ್ಟವಾಗಿದ್ದರೂ, ಎಲ್ಲೋ ಎದೆಯೊಳಗೆ ಅವಳು ಅಪಾಯಕಾರಿ ಅನಿಸತೊಡಗಿತ್ತು. ಅವಳು ಬಡಪೆಟ್ಟಿಗೆ ಬಗ್ಗುವ, ಹೊಗಳಿಕೆಗೆ ಮಣಿಯುವ, ಕಣ್ಸೆರೆ ಹಿಡಿದರೆ ನೆಲ ನೋಡುವ ಹೆಣ್ಣಾಗಿರಲಿಲ್ಲ. ಅವಳ ನಡೆಯಲ್ಲಿದ್ದ ಆತ್ಮವಿಶ್ವಾಸ ನನ್ನನ್ನು ಬಲಹೀನಗೊಳಿಸುತ್ತಿರುವಂತೆಯೂ, ಅವಳು ನನ್ನನ್ನು ಇಕ್ಕಟ್ಟಿನಲ್ಲಿ ಸಿಲುಕಿಸಬಲ್ಲಳೆಂಬ ಸಣ್ಣ ಭೀತಿಯನ್ನೂ ಹುಟ್ಟುಹಾಕತೊಡಗಿತ್ತು. ನಾನು ಎದ್ದರೂ ಆಕೆ ಏಳಲಿಲ್ಲ. ಪುಸ್ತಕ ಕೈಲಿ ಹಿಡಿದು ಕತ್ತೆತ್ತಿ, 'ಎಲ್ಲಿಗೆ ಹೊರಟಿರಿ' ಎಂಬಂತೆ ನೋಡಿದವಳು. 'ನಿಮ್ಮ ಗೋಪಣ್ಣ ಊಟ ಮಾಡಿಕೊಂಡು ಹೋಗುವಂತೆ ಹೇಳಿದ್ದಾರೆ' ನಕ್ಕಳು.

ನನಗೆ ಸರಿಯಾದ ಕೋಪ ಬಂತು ನಾನು ನಗುತ್ತ 'ಬಹಳ ಸಂತೋಷ, ಒಳ್ಳೆದು' ಎನ್ನುತ್ತಾ ಕುಸಿದೆ.

'ನೋಡಿ ಕಥೆಗಾರರಿಗೆ ಸರಿಯಾಗಿ ನಟಿಸಲು ಬರುವುದಿಲ್ಲ' ಅವಳು ಪಕಪಕ ನಕ್ಕಳು.

'ಹಾಗೇನಿಲ್ಲ ಮೇಡಂ'

'ಹಾಗಾದರೆ ನಟಿಸ್ತೀರಾ ಅಂತಾಯ್ತು, ನಟಿಸದೆ ಇನ್ನೇನು? ತೀರ ನೀವು ಕಥೆಯಲ್ಲಿ ಬರೆದ ಪಾತ್ರದ ನಿಜರೂಪವೊಂದು ನಿಜಕ್ಕೂ ಕಣ್ಮುಂದೆ ಬಂದು ಕೂತಿರುವಾಗಲೂ ನೀವು ಏನೂ ತಿಳಿಯದ ಅಪ್ಪಾವಿಯ ಹಾಗೆ ಮುಖ ಮಾಡಿಕೊಂಡು ಕೂತಿದ್ದೀರಿ ಅಂದರೆ ಅದೇನೂ ಸಾಮಾನ್ಯವಲ್ಲ'

ಮಾತು ಮತ್ತೆ ಮೊದಲಿಗೆ ಬಂದು ನಿಂತಿತು.

'ಮೇಡಂ, ಯು ಆರ್ ಟೇಕಿಂಗ್ ಟೂ ಮಚ್ ಲಿಬರ್ಟಿ'

'ಮೇ ನಾಟ್ ಬಿ, ಯಾಸ್ ಮಚ್ ಯಾಸ್ ಯು ಟುಕ್ ವಿಥ್ ಅಸ್ ಸರ್'

'ಹೀಗೆಲ್ಲ ಮಾಡಿ, ನೀವೊಬ್ಬ ಲೇಖಕನ ಸ್ವಾತಂತ್ರ್ಯವನ್ನು ಕುಂದಿಸುವ ಪ್ರಯತ್ನ ಮಾಡುತ್ತಿದ್ದೀರೆಂದು ನಿಮಗೆ ಅನಿಸುತ್ತಿಲ್ಲವೆ? ಹೇಳಿದೆನಲ್ಲ ಮೇಡಂ. ನಮಗೆ ಎಲ್ಲಿಂದಲೋ ಒಂದು ಮಾಂತ್ರಿಕ ಕಾಗೆ ಊಟ ತಂದು ಹಾಕುವುದಿಲ್ಲ, ಎಲ್ಲೋ ಹೇಳಿದ್ದು, ಕೇಳಿದ್ದು ನೋಡಿದ್ದು ಗ್ರಹಿಕೆಗೆ ದಕ್ಕಿದ್ದು ಕಾಡುವಿಕೆಯಾಗಿ ಎದೆಯೊಳಗೆ ಉಳಿದ ಯಾವುದೋ ಒಂದು ಎಳೆ ನಾಳೆ ಕಥೆಯಾಗುತ್ತದೆ ಅಷ್ಟೇ, ಇದಕ್ಕೆಲ್ಲ ಮೊದಲಿಗೆ ಇಷ್ಟು ವಿವರಣೆ ಕೊಡಬೇಕಂತಲೇ ಇಲ್ಲ, ಅಂಥದ್ದರಲ್ಲಿ ನೀವು..'

'ಇರಿ, ಇರಿ' ಅವಳು ತಡೆದಳು. 'ಇದನ್ನೆಲ್ಲ ಅರ್ಥ ಮಾಡಿಕೊಳ್ಳುವ ಕನಿಷ್ಠ ಪ್ರಜ್ಞೆ ನನಗಿರಲಾರದೆಂದು ಭಾವಿಸುವ ನಿಮ್ಮ ಬಗ್ಗೆ ನನಗೆ ಕರುಣೆಯಿದೆ ಸರ್. ಆದರೆ ಕಥೆ ಎಂದುಕೊಂಡು ನೀವು ಬರೆಯುವುದು ಇನ್ನೊಬ್ಬರ ಬದುಕನ್ನು ಎಂಬ ಎಚ್ಚರ ನಿಮಗೂ ಇರಬೇಕು. ಇದು ನನ್ನ ಕಥೆ. ಅಷ್ಟಕ್ಕೂ ನನ್ನ ಆಕ್ಷೇಪ ಇಲ್ಲಿ ನೀವು ಬರೆದ ಕಥೆಯಲ್ಲಿ ಒಂದು ತಪ್ಪಾಗಿದೆ ಎಂಬುವುದೇ ಹೊರತು ಯಾಕೆ ಬರೆದಿರಿ ಅನ್ನೋದಲ್ಲ.'

'ಅದೇನದು ಹೇಳಿ ಆಯ್ತು, ನೋಡುವ' ನಾನು ಸಿಡುಕಿದೆ.

'ಅದೇ ಆಗಲೇ ಹೇಳಿದೆನಲ್ಲ, ಅವರೇನೂ ನೀವು ಬರೆದಂತೆ, ಕತ್ತಲ ಕಾವಳದಲ್ಲಿ ಕಳ್ಳರಂತೆ ಸಂಧಿಸುತ್ತಿರಲಿಲ್ಲ, ಬಟಾಬಯಲಿನಲ್ಲಿ ಬೆಳಕಿನಂತೆ ಸಂಧಿಸುತ್ತಿದ್ದರು ಅಂತ.'

'ಕ್ಷಮಿಸಿ, ನನಗೆ ತಿಳಿದದ್ದು ಬರೆದೆ'.

ಅವಳು ಪಕಪಕ ನಕ್ಕಳು. ಅವಳು ಹಾಗೆ ನಗುವಾಗ, ಅವಳ ಹಲ್ಲಿನ ಸಾಲಿನಲ್ಲೊಂದು ಎತ್ತಿದ ಹಲ್ಲು ಹೊಳೆಯಿತು. ಭಗವಂತಾ, ನನ್ನ ಕಥೆಯ ಇಂದುಮತಿಗೂ ಹೀಗೇ ಮುಂದಿನ ಸಾಲಿನ ಕೋರೆಹಲ್ಲಿನಲ್ಲಿ ಸಾಲಿನಲ್ಲೊಂದು ಎತ್ತು ಹಲ್ಲಿರುವಂತೆ ಬರೆದಿದ್ದೀನಲ್ಲ, ಇದೆಂಥಾ ಕಾಕತಾಳೀಯತೆ! ನಾನು ಸಣ್ಣಗೆ ಬೆವರಿದೆ.

'ಮೇಡಂ, ತಿಳಿದದ್ದು ಅಲ್ಲ, ಹೊಳೆದಿದ್ದು ಬರೆದೆ' ತೊದಲಿದೆ.

'ಐ ಪಿಟೀ ಯು'ಎಂದಳು.

ಅದನ್ನು ಕೇಳಿ ನನಗೆ 'ಗೆಟ್ ಔಟ್ ಯು ಬ್ಲಡೀ..' ಎಂದೆಲ್ಲ ಚೀರಬೇಕೆನಿಸುವಷ್ಟು ಕೋಪ ಬಂದಿತ್ತು.